[redacted]

# ವಿಶ್ವಬ್ಯಾಂಕ್

ಸಂಪರ್ಕಗಳಿಗಾಗಿ: ದೆಹಲಿಯಲ್ಲಿ: ಗೀತಾಂಜಲಿ ಛೋಪ್ರಾ (91 11) 2461-7241
ಇಮೈಲ್: gchopra@worldbank.org
ವಾಷಿಂಗ್‌ಟನ್‌ನಲ್ಲಿ: ಕರೀನಾ ಮಾನಸೇ (202) 473-1729
ಇ-ಮೈಲ್: kmanasseh@worldbank.org

## ಭಾರತಕ್ಕಾಗಿ ವಿಶ್ವಬ್ಯಾಂಕ್ ಸಮೂಹದಿಂದ ಹೊಸ ಕಾರ್ಯತಂತ್ರದ ಪ್ರಾರಂಭ

**ವಾಷಿಂಗ್‌ಟನ್, ಆಗಸ್ಟ್ ೨೬, ೨೦೦೪:** ವಿಶ್ವದ ಅತಿಬಡವರಿಗೆ ಸಂಬಂಧಿಸಿದ ಅಭಿವೃದ್ಧಿ ಸಾಧನೆಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಿಶ್ವಬ್ಯಾಂಕು ಸಮೂಹದ[1], ಭಾರತ ಕುರಿತಾದ ಹೊಸ ಕಾರ್ಯತಂತ್ರೋಪಾಯದ ಮೇರೆಗೆ, ಬಾರತಕ್ಕೆ ನೀಡುವ ಸಾಲವನ್ನು ಹೆಚ್ಚಿಸಿ. ವರ್ಷಕ್ಕೆ ೩ ಬಿಲಿಯ ಡಾಲರುಗಳ ಸಾಲ ನೀಡುವ ಯೋಜನೆ ಹಾಕಿಕೊಳ್ಳಲಾಗುತ್ತಿದೆ.

ಬ್ಯಾಂಕಿನ ಕಾರ್ಯಕಾರೀ ನಿರ್ದೇಶಕರ ಮಂಡಳಿ ಇಂದು ೨೦೦೫-೨೦೦೮ರ ಸಾಲಿನ ತಂತ್ರೋಪಾಯಗಳ ದಾಖಲೆ ಪತ್ರದ ಕುರಿತು ಚರ್ಚಿಸಿದೆ. ಇದರಲ್ಲಿ, ಭಾರತ ತನ್ನ ಅಭಿವೃದ್ಧಿ ಗುರಿಗಳನ್ನು ತಲಪುವಂತೆ ಸಹಕರಿಸುವ ತಂತ್ರೋಪಾಯ ಹಾಗೂ ಬ್ಯಾಂಕ್ ನೀಡಬೇಕಾದ ಸಹಾಯದ ಮಟ್ಟದ ಕುರಿತು ಚರ್ಚಿಸಲಾಗಿದೆ.

ಭಾರತದ ಆರ್ಥಿಕತೆಯ ಪ್ರಮಾಣ ಹಾಗೂ ಸಾಮಾಜಿಕ ಅಭಿವೃದ್ಧಿಯ ಮಟ್ಟಕ್ಕೆ ಸಂಬಂಧಿಸಿದಂತೆ ವಿಶ್ವಬ್ಯಾಂಕಿನ ಸಮೂಹದ ಸಂಪನ್ಮೂಲಗಳು ಸಾಮಾನ್ಯ ಪ್ರಮಾಣದಲ್ಲಿವೆ. ಇಲ್ಲಿರುವ ಸವಾಲು ಎಂದರೆ, ಜ್ಞಾನ ಹಾಗೂ ಸಾಲವೂ ಸೇರಿದಂತೆ, ಬ್ಯಾಂಕಿನ ವಿವಿಧೆಡೆಗಳ ಸಂಪನ್ಮೂಲಗಳ ಕ್ರೋಢೀಕರಣದ ಮೂಲಕ ವಿಶ್ವದ ಅತ್ಯಂತ ಬಡ ಜನರಲ್ಲಿ ಕೆಲವರ ಜೀವನ ಗುಣಮಟ್ಟ ಪ್ರಗತಿಗಾಗಿ ಸಹಕರಿಸುವುದು ಹಾಗೂ ಆ ಮೂಲಕ ಭಾರತ ತನ್ನ ಮಿಲೆನಿಯಂ ಡೆವಲಪ್‌ಮೆಂಟ್ ಗೋಲ್ (ಎಂಡಿಜಿ) ಸಾಧಿಸಲು ಸಹಕರಿಸುವುದು.

ಭಾರತ ಇತ್ತೀಚಿನ ವರ್ಷಗಳಲ್ಲಿ ತ್ವರಿತ ಗತಿಯಲ್ಲಿ ಪ್ರಗತಿ ಸಾಧಿಸಿದೆ. ೧೯೯೦ರ ದಶಕದಲ್ಲಿ ಅದರ ಗಣನೀಯ ಆರ್ಥಿಕ ಸಾಧನೆಗಳಿಂದ ಕೋಟಿಗಟ್ಟಲೆ ಜನರು ಬಡತನದಿಂದ ಚೇತರಿಸುವಂತಾಗಿದೆ. ಆದರೂ ಸಹ, ಈ ಬೃಹತ್ ದೇಶ, ವಿಶ್ವದಾದ್ಯಂತದ ಬಡವರಲ್ಲಿ ಕಾಲಂಶದಷ್ಟು ಬಡಜನರನ್ನು ಹೊಂದಿದೆ. ಸರಾಸರಿ ಆದಾಯ ಇನ್ನೂ ಸಹ ಬಹಳ ಕಡಿಮೆಯಿದೆ. ಕೆಲವೊಂದು ಪ್ರಮುಖ ಸಾಮಾಜಿಕ ಸೂಚ್ಯಂಕಗಳಲ್ಲಿ ಆದ ಪ್ರಗತಿ ಅತೀ ಕಡಿಮೆ. ಯುವ-ತಾಯಿಯರು ಹಾಗೂ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಬದುಕಿ ಉಳಿಯುವ ದರದಲ್ಲಿ ವೃದ್ಧಿ ಕಂಡು ಬಂದಿಲ್ಲ. ಎಚ್‌ಐವಿ/ಏಡ್ಸ್ ತ್ವರಿತವಾಗಿ ಹರಡುತ್ತಿದೆ. ಈ ಪಿಡುಗು ದೇಶವನ್ನು ಅಸಾಯದ ಅಂಚಿಗೆ ನೂಕುತ್ತಿದೆ. ಅವಕಾಶಗಳು ಅದರಲ್ಲೂ ಸಹ ಶಿಕ್ಷಣ, ಆರೋಗ್ಯ ಹಾಗೂ ಮಹಿಳೆಯರು ಮತ್ತು ಹಿಂದುಳಿದ ವರ್ಗದವರ ಆರ್ಥಿಕ ಅವಕಾಶಗಳ ಲಭ್ಯತೆಯಲ್ಲಿ ಬಹಳಷ್ಟು ತಾರತಮ್ಯವಿದೆ ಅಷ್ಟೆ ಅಲ್ಲ, ಭಾರತದ ರಾಜ್ಯಗಳ ನಡುವೆಯೇ ಬಹಳಷ್ಟು ಅಂತರವಿದೆ. ತತ್‌ಪರಿಣಾಮವಾಗಿ ಬಡತನವು ಭೌಗೋಳಿಕವಾಗಿ ಕೆಲವೆಡೆ ಅಧಿಕವಾಗಿ ತುಂಬಿದೆ.

''*ಇದನ್ನು ನೋಡಿದಾಗ ಭಾರತ ಒಂದೇ ಬಾರಿಗೆ ಎರಡೂ ವಿಶ್ವಗಳನ್ನು ಆವರಿಸಿದ ಚಿತ್ರ ಕಾಣಬರುತ್ತದೆ*'' ಎನ್ನುತ್ತಾರೆ, ವಿಶ್ವಬ್ಯಾಂಕಿನ, ಭಾರತದ ಕಂಟ್ರೀ ಡೈರೆಕ್ಟರ್ **ಮೈಕೆಲ್ ಕಾರ್ಟರ್.** ''*ಒಂದೆಡೆ ಆರ್ಥಿಕ ಸುಧಾರಣೆ ವಾಗೂ ಸಾಮಾಜಿಕ ಬದಲಾವಣೆಗಳು ಪ್ರಾರಂಭಗೊಂಡು ಪ್ರಗತಿ ಆಗಿದೆ. ಜನರ ಜೀವನದ ಮೇಲೆ ಪರಿಣಾಮ ಬೀರಿದೆ, ಅವಕಾಶಗಳು ತೆರೆದುಕೊಂಡಿವೆ ಇನ್ನೊಂದೆಡೆ, ನಾಗರಿಕಗೆ ಸಾರ್ವಜನಿಕ ಸೇವೆಗಳು, ಉದ್ಯೋಗ ಅವಕಾಶಗಳು, ಹಾಗೂ ಉಜ್ವಲ ಭವಿಷ್ಯಗಳು ದೊರೆಯದೆ ಸಂಪೂರ್ಣವಾಗಿ ಹಿಂದುಳಿದಂತೆ ತೋರುತ್ತದೆ. ಭಾರತದ ಈ ಎರಡೂ ವೈರುಧ್ಯ ತೆಗಳ ನಡುವಣ ದೂರವನ್ನು ಕಡಿಮೆಗೊಳಿಸುವುದೇ ಭಾರತ ಇಂದು ಎದುರಿಸುತ್ತಿರುವ ನೈಜ ಸವಾಲು.*''

ಕಾರ್ಯತಂತ್ರ ಕಾಗದಪತ್ರವು ಭಾರತಕ್ಕೆ ಸಂಬಂಧಿಸಿದಂತೆ ಬ್ಯಾಂಕಿನ ಕಾರ್ಯಕ್ರಮಗಳ ಕಟಿಬದ್ಧತೆಯನ್ನು ಸಾರುತ್ತದೆ. ಇದರಲ್ಲಿ ಫಲಿತಾಂಶಕ್ಕೆ ಹೆಚ್ಚಿನ ಒತ್ತೂ ನೀಡಲಾಗಿದೆ. ನಿರ್ದಿಷ್ಟ ಆಯ್ಕೆ ಇದೆ. ಸಹಾಯ ಸ್ವಾಗತಾರ್ಹವಾಗಿ ಇರುವ ಚಟುವಟಿಕೆಗಳಿಗೆ ಸಂಪನ್ಮೂಲಗಳನ್ನು ಒದಗಿಸುವಂತೆ ಮಾಡವುದು ಹಾಗೂ ಅದನ್ನು ಪರಿಣಾಮಕಾರಿ ಆಗಿಸುವುದು. ಉದ್ದೇಶ, ಹೆಚ್ಚಿನ ಜ್ಞಾನ ಸಂಬಂಧಿತ ಸೇವೆಗಳ ಕುರಿತಾದ ಕಟಿಬದ್ಧತೆಯಿಂದ ಬ್ಯಾಂಕಿನ ಉತ್ಪನ್ನಗಳನ್ನು ಭಾರತೀಯ ಹಿನ್ನೆಲೆಯಲ್ಲಿ ವಾಸ್ತವಿಕವಾಗಿ ಬಳಸಬಹುದು.

---

೧ ವಿಶ್ವ ಬ್ಯಾಂಕ ಸಮೂಹದಲ್ಲಿ ಪುನರಾಚನೆ ಮತ್ತು ಅಭಿವೃದ್ಧಿಗಾಗಿ ಇರುವ ಅಂತರರಾಷ್ಟ್ರೀಯ ಬ್ಯಾಂಕ್ (ಐಬಿಆರ್‌ಡಿ), ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ (ಐಡಿಎ), ಅಂತರರಾಷ್ಟ್ರೀಯ ಹಣಕಾಸು ನಿಗಮ (ಐಎಫ್‌ಸಿ), ಹಾಗೂ ಮಲ್ಟೀಲ್ಯಾಟರಲ್ ಇನ್‌ವೆಸ್ಟ್‌ಮೆಂಟ್ ಗ್ಯಾರಂಟಿ ಏಜೆನ್ಸಿ (ಎಂಐಜಿಎ) ಸೇರಿವೆ. 'ಬ್ಯಾಂಕ್'' ಐಬಿಆರ್‌ಡಿ ಮತ್ತು ಐಡಿಎ-ಯನ್ನು ಉಲ್ಲೇಖಿಸುತ್ತದ

ಕಾರ್ಯತಂತ್ರ ಮೂರು ಕಾರ್ಯಕ್ರಮ ಆದ್ಯತೆಗಳನ್ನು, ಗುರುತಿಸಿಕೊಂಡಿದೆ

೧. ಸರಕಾರದ ಪ್ರಭಾವ - ಪರಿಣಾಮ ವನ್ನು ಹೆಚ್ಚಿಸುವುದು.

೨. ಜನರಲ್ಲಿ ಬಂಡವಾಳಕ್ಕೆ ಬೆಂಬಲ ಹಾಗೂ ಸಮುದಾಯಗಳಿಗೆ ಅಧಿಕಾರನೀಡುವುದು; ಹಾಗೂ

೩. ಖಾಸಗಿ ವಲಯದ ಮೂಲಕ ಪ್ರಗತಿ ಸಾಧಿಸಲು ಉತ್ತೇಜನ.

ಈ ಆದ್ಯತೆಗಳ ಅನುಸಾರ ಬ್ಯಾಂಕಿನ ಕಾರ್ಯಕ್ರಮ ಹಾಗೂ ಸಾಲ ನೀಡುವಿಕೆ ಈ ಕೆಳಗಿನ ವಲಯಗಳಲ್ಲಿ ವಿಸ್ತರಿಸಲ್ಪಡುತ್ತದೆ

- **ಮೂಲಸೌಲಭ್ಯ:** ರಸ್ತೆಗಳು, ಸಂಚಾರ-ಸಾಗಾಟ, ವಿದ್ಯುತ್, ಜಲ ಪೂರೈಕೆಡ ಹಾಗೂ ನೈರ್ಮಲ್ಯೀಕರಣ, ನೀರಾವರಿ ಮತ್ತು ನಗರಾಭಿವೃದ್ಧಿ - ಅದರಲ್ಲೂ ತೀವ್ರಗತಿಯ ಪ್ರಗತಿ ಹಾಗೂ ಸುಧಾರಿತ ಸೇವೆ ನೀಡುವುದಕ್ಕೆ ಹೆಚ್ಚಿನ ಆದ್ಯತೆ

- **ಮಾನವ ಅಭಿವೃದ್ಧಿ** : ಶಿಕ್ಷಣ, ಆರೋಗ್ಯ ಸಾಮಾಜಿಕ ರಕ್ಷಣೆ; ಹಾಗೂ

- **ಗ್ರಾಮೀಣ ಜೀವನೋಪಾಯ** : ಸಮುದಾಯ ಮಟ್ಟದ ಮಾರ್ಗೋಪಾಯಗಳು

ಇದರಲ್ಲಿ ಪ್ರಮುಖ ಬದಲಾವಣೆ ಎಂದರೆ ಈ ವಲಯದಲ್ಲಿ ಅಗತ್ಯದ ಎಂಡಿಜಿಗಳನ್ನು ತಲಪುವಲ್ಲಿ ಬೇಕಾದ ರಾಷ್ಟ್ರೀಯ ಕಾರ್ಯಕ್ರಮಗಳಿಗಾಗಿ ಅಭಿವೃದ್ಧಿಗೆ ಸಂಬಂಧಿಸಿದ ಇತರ ಸಹ ಭಾಗಿಗಳೊಂದಿಗೆ ಜೊತೆ ಸೇರಿ ಹಣಕಾಸು ಒಗಗಿಸುವುದನ್ನು ಪ್ರಾರಂಭಿಸುವುದು.

ಕಂಟ್ರಿ ಸ್ಟ್ರ್ಯಾಟಜಿ, ಭಾರತದ ರಾಜ್ಯಗಳಿಗೆ ಸಂಬಂಧಿಸಿದಂತೆ ಪ್ರಮುಖ ಬದಲಾವಣೆಗಳನ್ನು ಸೂಚಿಸಿದ ೧೯೭೭ರಿಂದ ವ್ಯಾಪಕ ಸುಧಾರಣೆಗಳನ್ನು ಮಾಡುವ ಭರವಸೆ ನೀಡಿದ ರಾಜ್ಯಗಳತ್ತ ಬ್ಯಾಂಕ್ ಸಮೂಹ ಗಮನ ಹರಿಸಿತ್ತು. ಉದಾಹರಣೆಗೆ, ಕಳೆದ ಅವಧಿಯಲ್ಲಿ ಆಂಧ್ರಪ್ರದೇಶ, ಕರ್ನಾಟಕ ಹಾಗೂ ಉತ್ತರ ಪ್ರದೇಶದತ್ತ ಗಮನಹರಿಸಲಾಗಿತ್ತು. ಭಾರತದಲ್ಲಿ ತ್ವರಿತಗತಿಯಲ್ಲಿ ಪ್ರಗತಿ ಹೊಂದುತ್ತಿರುವ ಹಾಗೂ ನಿಧಾನ ಗತಿಯಲ್ಲಿ ಪ್ರಗತಿ ಹೊಂದುತ್ತಿರುವ ರಾಜ್ಯಗಳ ನಡುವಣ ಅಂತರ ಹೆಚ್ಚುತ್ತಿದ್ದಂತೆ ಈ ನಿಲುವಿನಲ್ಲಿ ಕೆಲವೊಂದು ಬದಲಾವಣೆಗಳು ಅಗತ್ಯವಾಗಿವೆ. ಅವುಗಳೆಂದರೆ:

- ಮೊದಲನೆಯದಾಗಿ, ಭಾರತ ಸರಕಾರ ಹಾಗೂ ಇತರ ಸಹಭಾಗಿಳೊಂದಿಗೆ ಸಮಾಲೋಚಿಸಿ, ಎಲ್ಲಾ ಬೃಹತ್ ಹಾಗೂ ಬಡ ರಾಜ್ಯಗಳು, ಸುಧಾರಣೆಗಳ ಕುರಿತು ಚರ್ಚಿಸುವುದನ್ನು ಬ್ಯಾಂಕ್ ಖಚಿತ ಪಡಿಸುತ್ತದೆ.

- ಎರಡನೆಯದಾಗಿ, ಭಾರತದಲ್ಲಿ ಅತೀ ಹೆಚ್ಚು ಬಡತನ ಇರುವ ರಾಜ್ಯಗಳಾದ ಬಿಹಾರ, ಜಾರ್ಖಂಡ, ಒರಿಸ್ಸಾ, ಹಾಗೂ ಉತ್ತರ ಪ್ರದೇಶಗಳಲ್ಲಿ ಬ್ಯಾಂಕ್ ಅಭಿವೃದ್ಧಿಪರ ಸಂಬಂಧ ರಚಿಸಲು ಹೆಚ್ಚು ಕ್ರಿಯಾಶೀಲವಾಗಿ ಕೆಲಸಮಾಡಲಿದೆ.

- ಮೂರನೆಯದಾಗಿ, ರಾಜ್ಯ ಮಟ್ಟಾದ ಹೊಂದಾಣಿಕೆ ಸಾಲದ ಕಾರ್ಯ ಚಟುವಟಿಕೆಗಳ ಮೂಲಕ ಎಂಡಿಜಿಗಳನ್ನು ಸಾಧಿಸಲು ಬೆಂಬಲ ನೀಡುವುದು ಕೂಡ ಬ್ಯಾಂಕಿನ ಕಾರ್ಯಕ್ರಮದ ಪ್ರಮುಖ ಭಾಗವಾಗಿರುತ್ತದೆ.

- ನಾಲ್ಕನೆಯದಾಗಿ "ಕೇಂದ್ರೀಕೃತ ರಾಜ್ಯಗಳ" ಮೇಲೆ ಗಮನ ಹರಿಸುವುದರ ಬದಲಾಗಿ, ಬಂಡವಾಳ ಸಾಲವನ್ನು ಹೆಚ್ಚು ವ್ಯಾಪಕವಾಗಿ ನೀಡಲಾಗುವುದು. ಯೋಜನೆಗಳ ಸಫಲತೆಗೆ, ವಲಯ ನಿರ್ದಿಷ್ಟವಾದ ಷರತ್ತುಗಳು ಅಗತ್ಯವೆಂದು ಅನುಭವದಿಂದ ಕಂಡು ಬಂದಿರುವಲ್ಲಿ ಆಯಾ ವಲಯಕ್ಕೆ ಇರುವಂತಹ ಮಾರ್ಗಸೂಚಿಗಳಂತೆ ಸಾಲವನ್ನು ಒದಗಿಸಲಾಗುವುದು.

೨೦೧೫ರ ಒಳಗಾಗಿ ಬಡತನವನ್ನು ಅರ್ಧದಷ್ಟು ಕಳಗಿಸುವುದೂ ಒಂದಾಗಿರುವ ಎಂಡಿಜಿಗಳ ಸಂದಿಗ್ಧ ಅವಧಿಯನ್ನು ಈ ಕಾರ್ಯತಂತ್ರ ಒಳ ಗೊಂಡಿದೆ ಎಂದು ಕಾರ್ಟರ್ ಹೇಳಿದ್ದಾರೆ. ''*ವಿಶ್ವದ ಬಡವರಲ್ಲಿ ಕಾಲಂಶದ ಬಡವರಿಗೆ ಮನೆಯಾಗಿರುವ ಭಾರತಕ್ಕೆ, ಅತ್ಯುತ್ತಮ ಪ್ರಕಾರದ ಜ್ಞಾನ, ಹಾಗೂ ಅಭಿವೃದ್ಧಿಗಾಗಿ ಹಣಕಾಸು ನೆರವು ನೀಡುವುದು, ವಿಶ್ವದಲ್ಲಿನ ಬಡತನವನ್ನು ಕಡಿತಗೊಳಿಸುವುದು ಬ್ಯಾಂಕ್ ಸಮುದಾಯದ ಧ್ಯೇಯವಾಗಿದೆ*''.

ಅಂತರ ರಾಷ್ಟ್ರೀಯ ಹಣಕಾಸು ನಿಗಮ (ಐಎಫ್‌ಸಿ) ಈಕ್ವಿಟಿ ಮತ್ತು ಸಾಲ ಹಣಕಾಸು, ಗ್ಯಾರೆಂಟಿಗಳು, ತಾಂತ್ರಿಕ ನೆರವು - ಇವೆಲ್ಲವನ್ನು ಭಾರತದಲ್ಲಿ ಖಾಸಗಿ ವಲಯಕ್ಕೆ ನೀಡುತ್ತದೆ. ಮೂಲ ಸವಲತ್ತುಗಳಿಗೆ, ಹೊಸತನದ ರಚನೆಗಳು ಬೇಕಾದಲ್ಲಿ ಹಣಕಾಸು ಒದಗಿಸುವುದೂ ಸಹ ಇದರಲ್ಲಿ ಸೇರಿದೆ. ಇವುಗಳು ಖಾಸಗಿ ಬಂಡವಾಳದಾರರ ಇತಿ ಮಿತಿಯೊಳಗೆ ಇರುವ ಯೋಜನೆಗಳು, ಹಾಗೂ ಮಧ್ಯಮ ಗಾತ್ರದ ಉತ್ಪಾದನೆ ಕೃಷಿವ್ಯಾಪಾರ, ಹಾಗೂ ದೇಶೀಯವಾಗಿ ಮತ್ತು ಅಂತರರಾಷ್ಟ್ರೀಯವಾಗಿ ಹೊಸ ಮಾರುಕಟ್ಟೆಗಳಿಗೆ ಪ್ರವೇಶಿಸುವ ಕಂಪೆನಿಗಳಿಗೆ ಹಣಕಾಸು ಒದಗಿಸುತ್ತದೆ. ವಿಶ್ವ ಬ್ಯಾಂಕಿನ ಜಾಗತಿಕ ಜ್ಞಾನ ಬೆಂಬಲ ನೀತಿ ಸಮಾಲೋಚನೆಗಳು, ವಿಶ್ಲೇಷಣೆಗಳು ತಾಂತ್ರಿಕ ಸಹಾಯ ಹಾಗೂ ಸಲಹಾ ಸೇವೆಗಳು ಇವೆಲ್ಲವನ್ನು ಸಹ ಈ ಕಾರ್ಯಕ್ರಮದ ಆದ್ಯತೆಗಾಗಿ ಪುನರ್ ಕೇಂದ್ರೀಕೃತ ಗೊಳಿಸಲಾಗುವುದು. ರಾಷ್ಟ್ರೀಯ ಹಿತಾಸಕ್ತಿಯ ಹಾಗೂ ಬೇಡಿಕೆ ಮೂಲದ ಪ್ರತಿಕ್ರಿಯೆಗಳಿಗೆ ಬ್ಯಾಂಕ್ ಸ್ಪಂದಿಸುವಲ್ಲಿ ಬ್ಯಾಂಕಿನ ವಿಶ್ಲೇಷಣಾ ಸಾಮರ್ಥವನ್ನು ಹೆಚ್ಚಿಸುವುದನ್ನೂ ಈ ಕಾರ್ಯತಂತ್ರದಲ್ಲಿ ರೂಪಿಸಲಾಗಿದೆ.

ಈ ತಂತ್ರೋಪಾಯವನ್ನು ಒಂದು ವರ್ಷಕ್ಕಿಂತಲೂ ಹಿಂದಿನಿಂದ ರೂಪಿಸಲಾಗುತ್ತಿದೆ. ಇದರ ಸಿದ್ಧತೆಯ ಸಮಯದಲ್ಲಿ ಸಹ, ಸರಕಾರ ಮತ್ತು ಸಂಬಂಧಿತ ಖಾತೆಗಳೊಂದಿಗೆ ಚರ್ಚಿಸಲಾಗಿದೆ. ನಾಗರಿಕ ಸಮಾಜಗಳೊಂದಿಗೆ, ಮಾಧ್ಯಮಗಳ ಹಾಗೂ ಖಾಸಗಿ ವಲಯದೊಂದಿಗೆ ಸಂವಾದದಲ್ಲಿ ತೊಡಗಿರುವ ಬ್ಯಾಂಕಿನ ಪ್ರತಿನಿಧಿಗಳಿಂದಲೂ ಮಾಹಿತಿ ಸಂಗ್ರಹಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ:

http://www.worldbank.org/indiastrategy